3.20 ಪಿ.ಎಂ

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾನು ಕೇಳಿದ್ದೇನು?

ಅಧ್ಯಕ್ಷರು: ಅವರು ಆಗುತ್ತೆ ಎಂದು ಹೇಳುತ್ತಾರೆ, ನೀವು ಇಲ್ಲ ಎಂದು ಹೇಳುತ್ತೀರಿ, ಅಷ್ಟೇ ಅಲ್ಲಿರುವ ಉತ್ತರ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಸರ್ಕಾರದವರು ಬಹಳ ದೊಡ್ಡ ಪ್ರಚಾರ ತೆಗೆದುಕೊಂಡಿದ್ದಾರೆ. 127 ಕೋಟಿ ರೂ. ಬಡ್ಡಿ ಮನ್ನಾ ಮಾಡಿದ್ದೇವೆಂದು ಹೇಳಿ ಬಹಳ ದೊಡ್ಡ ಪ್ರಚಾರ ತೆಗೆದುಕೊಂಡಿದ್ದಾರೆ. ಆದರೆ ಇವರು 127 ಕೋಟಿ ರೂ ಬಡ್ಡಿ ಮನ್ನಾ ಮಾಡಿಲ್ಲ. ಇವರು ಮಾಡುತ್ತೀವೆಂದು ಹೇಳುತ್ತಿರುವುದು 63 ಕೋಟಿ ರೂ. ಆ 63 ಕೋಟಿ ರೂ ಬಡ್ಡಿಯನ್ನೂ ಇನ್ನೂ ಮನ್ನಾ ಮಾಡಿಲ್ಲ. ಇವರು ಬೋಗಸ್ ಸ್ಟೇಟ್‌ಮೆಂಟ್‌ಗಳನ್ನು ಕೊಡುತ್ತಿದ್ದಾರೆ. 30 ಕೋಟಿ ರೂ. ಬಿಡುಗಡೆ ಮಾಡುತ್ತೇವೆಂದು ಸರ್ಕಾರದ ಆದೇಶ ಮಾಡಿ ಮೂರು ತಿಂಗಳುಗಳಾಯಿತು. ಇನ್ನೂ ಹಣ ಬಿಡುಗಡೆಯಾಗಿಲ್ಲ. 31ನೇ ತಾರೀಖಿನೊಳಗೆ ಮಾಡದಿದ್ದರೆ ಮುಂದಿನ ವರ್ಷದ ರೈತರ ಭವಿಷ್ಯಕ್ಕೆ ಕಲ್ಲು ಚಪ್ಪಡಿ. ಇದನ್ನು ಪ್ರತಿಭಟನೆ ಮಾಡುತ್ತೇವೆ. ಸರ್ಕಾರದ ಈ ಧೋರಣೆಯನ್ನು ಖಂಡಿಸುತ್ತೇವೆ. ಇದು ರೈತ ವಿರೋಧಿ ಸರ್ಕಾರ. ನಾವು ಸಭಾತ್ಯಾಗ ಮಾಡುತ್ತೇವೆ.

(ಜನತಾದಳದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು: ಮುದ್ದಹನುಮೇಗೌಡರೇ ತಾವು ಮಾತನಾಡಿ.

(ಗೊಂದಲ)

ಬೇರೆಯವರಿಗೆ ಅವಕಾಶ ಕೊಡುವುದಿಲ್ಲ, ಮಾನ್ಯ ಮುದ್ದಹನುಮೇಗೌಡರೆ ತಾವು ಮಾತನಾಡಿ.

ಶ್ರೀ ಜಗದೀಶ್‌ಶೆಟ್ಟರ್: ಶೂನ್ಯವೇಳೆಯೆಂದರೂ ಹೀಗೆ ಮಾಡಬೇಕೆ? ಶೂನ್ಯವೇಳೆ ಎಂದರೆ ಅವಕಾಶ ಕೊಡಬೇಕಾಗುತ್ತದೆ.

(ಬಿ.ಜೆ.ಪಿ. ಸದಸ್ಯರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು.)

ಅಧ್ಯಕ್ಷರು: ಅದ್ಯಾವುದನ್ನೂ ಬರೆದುಕೊಳ್ಳಬೇಡಿ. ಅವರು ಹೇಳುವುದನ್ನು ಬರೆದುಕೊಳ್ಳಬೇಡಿ. ಮಾನ್ಯ ಕಾನೂನು ಸಂಸದೀಯ ಸಚಿವರು ಏನೋ ಹೇಳುತ್ತಿದ್ದಾರೆ. ಹೇಳಿ. ಮಂತ್ರಿಗಳು ಹೇಳುವುದನ್ನು ಬರೆದುಕೊಳ್ಳಿ.

(ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷಗಳು ಸಭಾತ್ಯಾಗ ಮಾಡಲು ಸಂಪೂರ್ಣವಾದ ಸ್ವಾತಂತ್ರ್ಯ, ಹಕ್ಕು ಇದೆ. ಏಕೆಂದರೆ ಜನರಪರವಾಗಿ ಇಂಥ ವಿಚಾರಗಳಲ್ಲಿ ಬಹಳ ಸೀರಿಯಸ್ ಆಗಿದ್ದಾರೆ ಎಂಬುದು ಗೊತ್ತಾಗಬೇಕಾಗುತ್ತದೆ. ಇದು ಬಹಳ ಮುಖ್ಯ. ಇಲ್ಲಿ ಯಾರೋ ಶೂನ್ಯವೇಳೆಯಲ್ಲಿ ಇನ್ಯಾವುದನ್ನೋ ಕೇಳುವುದು ಅದರ ಲಾಭವನ್ನು ಮಾಡಿಕೊಂಡು ತಮಗೆ ತಿಳಿದಿದ್ದನ್ನು ಹೇಳುವುದು,